## ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಶಿಕ್ಷಣ ಇಲಾಖೆಯಲ್ಲಿ ಇ–ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಕುರಿತು |
| ಓದಲಾಗಿದೆ | 1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಅ.ಸು.ಇ (ಆ.ಸು) ರವರ ಅ.ಸ.ಪ. ಸಂಖ್ಯೆ: ಸಿಅಸು.ಇ. 49.ಅಸಪ.2010 ದಿನಾಂಕ: 18.12.2010<br>2. ಕೇಂದ್ರ ಸರ್ಕಾರದ ಕಾರ್ಯದರ್ಶಿ, ಡಿಎಆರ್&ಪಿ, ನವದೆಹಲಿ ರವರ ಅ.ಸ.ಪ ಸಂಖ್ಯೆ: **K-11022/99/2010-AR dt: 26.11.2010** |

**ಪ್ರಸ್ತಾವನೆ:**

1. (1) ಮತ್ತು (2) ರಲ್ಲಿ ಓದಲಾದ ಪತ್ರದಲ್ಲಿ ಇ–ಅಡಳಿತ ವ್ಯವಸ್ಥೆಗೆ (Promoting e-Governance – The Smart Way Forward) ಸಂಬಂಧಿಸಿದಂತೆ ಕೇಂದ್ರ ಸರ್ಕಾರದ 2ನೇ ಆಡಳಿತ ಸುಧಾರಣಾ ಆಯೋಗವು ತನ್ನ 11 ನೇ ವರದಿಯಲ್ಲಿನ ಶಿಫಾರಸ್ಸುಗಳನ್ನು ಎಲ್ಲಾ ರಾಜ್ಯ ಸರ್ಕಾರಗಳು ಎಲ್ಲಾ ಹಂತದ ಅಧೀನ ಇಲಾಖೆಗಳ ಕಛೇರಿಗಳಲ್ಲಿ ಕಡ್ಡಾಯವಾಗಿ ಇ–ಅಡಳಿತ ಕಾರ್ಯಕ್ರಮಗಳನ್ನು ರಚನಾತ್ಮಕವಾಗಿ ಅನುಷ್ಠಾನಗೊಳಿಸುವ ಮೂಲಕ ಸಾರ್ವಜನಿಕರಿಗೆ ಪಾರದರ್ಶಕವಾದ ಆಡಳಿತವನ್ನು ಹಾಗೂ ತ್ವರಿತವಾಗಿ ಸೇವೆಗಳನ್ನು ಒದಗಿಸಲು ಸೂಚಿಸಿರುತ್ತಾರೆ.
2. ಇ–ಅಡಳಿತ ವ್ಯವಸ್ಥೆಗೆ ಸಂಬಂಧಿಸಿದ ಶಿಫಾರಸ್ಸುಗಳೆ ಅನುಷ್ಠಾನವು ಸಾರ್ವಜನಿಕರಿಗೆ ಪಾರದರ್ಶಕತೆ, ಜವಾಬ್ದಾರಿಯುತ ಆಡಳಿತ, ದಕ್ಷತೆ ಹಾಗೂ ನಿಕರವಾದ ಮಾಹಿತಿ ಮೂಲಕ ಉತ್ತಮ ಸೇವೆಗಳನ್ನು ನೀಡುವ ಸಲುವಾಗಿ ಎಲ್ಲಾ ಹಂತದಲ್ಲಿ ಇ–ಅಡಳಿತ ವ್ಯವಸ್ಥೆಯ ಅನುಷ್ಠಾನವು ಅನಿವಾರ್ಯವಾಗಿದೆ.
3. ಮೇಲೆ ಓದಲಾದ ಶಿಫಾರಸ್ಸುಗಳನ್ನು ಕಡ್ಡಾಯವಾಗಿ ಶಿಕ್ಷಣ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅಧೀನ ಇಲಾಖೆಗಳ ಇ–ಅಡಳಿತ ಘಟಕಗಳನ್ನು ರಚನಾತ್ಮಕವಾಗಿ ಉನ್ನತೀಕರಿಸಿ ಎಲ್ಲಾ ಮಾಹಿತಿ ತಂತ್ರಜ್ಞಾನ ಹಾಗೂ ಇ–ಅಡಳಿತ ಕಾರ್ಯಕ್ರಮಗಳನ್ನು ಸದರಿ ಘಟಕಗಳ ಮೂಲಕ ಅನುಷ್ಠಾನಗೊಳಿಸಲು ನಿರ್ದೇಶಕರು ಹಂತದ ಅಧಿಕಾರಿಗಳನ್ನು ಇ–ಅಡಳಿತ ಘಟಕಗಳ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲು ಉದ್ದೇಶಿಸಿದೆ.
4. ಮೇಲೆ ಓದಲಾದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 01 ಮಾಹಿತಿ 2011, ಬೆಂಗಳೂರು ದಿನಾಂಕ: 20.04.2011

5. ಇ–ಆಡಳಿತ ವ್ಯವಸ್ಥೆಗೆ (Promoting e-Governance – The Smart Way Forward) ಸಂಬಂಧಿಸಿದಂತೆ ಕೇಂದ್ರ ಸರ್ಕಾರದ 2ನೇ ಆಡಳಿತ ಸುಧಾರಣಾ ಆಯೋಗವು ತನ್ನ 11 ನೇ ವರದಿಯಲ್ಲಿನ ಶಿಫಾರಸ್ಸುಗಳನ್ನು **ಮೊದಲನೆ ಹಂತವಾಗಿ** ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಹಾಗೂ ಪ್ರಸ್ತುತ ಇರುವ ಇ–ಆಡಳಿತ ಘಟಕವನ್ನು ಮೇಲ್ದರ್ಜೆಗೆ ಉನ್ನತೀಕರಣಗೊಳಿಸುವ ಸಲುವಾಗಿ ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ರವರನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಇ–ಆಡಳಿತದ ಘಟಕದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

6. ಮುಖ್ಯಸ್ಥರು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಇಲಾಖೆಗಳು ಹಾಗೂ ಕೇಂದ್ರ ಪುರಸ್ಕರ ಕಾರ್ಯಕ್ರಮಗಳಾದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಸರ್ವ ಶಿಕ್ಷಣ ಅಭಿಯಾನದ ಇ–ಆಡಳಿತ ಕಾರ್ಯಕ್ರಮಗಳು ಹಾಗೂ ಇತರೆ ತಾಂತ್ರಿಕ ಕಾರ್ಯಕ್ರಮಗಳ ನಿರ್ವಹಣೆಯ ವಿಚಾರವಾಗಿ ತಾಂತ್ರಿಕ ಸಲಹೆಯನ್ನು ಒದಗಿಸುವಲ್ಲಿ ಸಹಕಾರವನ್ನು ಒದಗಿಸುವುದು.

7. ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಸರ್ವ ಶಿಕ್ಷಣ ಅಭಿಯಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಇ–ಆಡಳಿತ ಘಟಕದ ಹಿರಿಯ ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು, ತಾಂತ್ರಿಕ ಸಹಾಯಕರು ಹಾಗೂ ಹಿರಿಯ ಮತ್ತು ಕಿರಿಯ ಪ್ರೋಗ್ರಾಮರ್‌ಗಳು, ಡಾಟ ಎಂಟ್ರಿ ಆಪರೇಟರ್‌ಗಳು ಇ–ಆಡಳಿತ ಘಟಕದ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸಲು ಸೂಚಿಸಿದೆ.

8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಇಲಾಖೆಗಳು, ಅಪರ ಆಯುಕ್ತರು, ಧಾರವಾಡ & ಗುಲ್ಬರ್ಗ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಸರ್ವ ಶಿಕ್ಷಣ ಅಭಿಯಾನವೂ ಸೇರಿದಂತೆ 2011–12 ನೇ ಸಾಲಿನಿಂದ ವಾರ್ಷಿಕ ಇ–ಆಡಳಿತ ಯೋಜನೆಗಳು/ ತಾಂತ್ರಿಕ ಪ್ರಸ್ತಾವನೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಇ–ಆಡಳಿತ ಘಟಕದ ಪರಿಶೀಲನೆಯ ನಂತರ ಸರ್ಕಾರಕ್ಕೆ ಸಲ್ಲಿಸುವುದು.

9. ಇ–ಆಡಳಿತ ಘಟಕದ ಮುಖ್ಯಸ್ಥರು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ರಾಜ್ಯ ಯೋಜನಾ ನಿರ್ದೇಶಕರು, ಎಸ್‌ಎಸ್‌ಎ ರವರ ಸಮ್ಮುಖದಲ್ಲಿ ಕಡ್ಡಾಯವಾಗಿ ಆಗಿಂದಾಗ್ಗೆ ಇ–ಆಡಳಿತ ಘಟಕಗಳ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಿದೆ.

10. ಮಾನವ ಸಂಪನ್ಮೂಲವನ್ನು ರಚನಾತ್ಮಕವಾಗಿ ಬಳಸುವ ಉದ್ದೇಶದಿಂದ ಹಾಗೂ ತಾಂತ್ರಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೊಡಕಾಗುವುದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಇ-ಆಡಳಿತ ಘಟಕದಲ್ಲಿ ಹಲವಾರು ಇ-ಆಡಳಿತ ಕಾರ್ಯಕ್ರಮಗಳು ಹಾಗೂ ತಾಂತ್ರಿಕ ಕಾರ್ಯಗಳಲ್ಲಿ ತೊಡಗಿರುವ ಎಲ್ಲಾ ಖಾಯಂ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಯವರನ್ನು ಸರ್ಕಾರದ ಅನುಮತಿ ಪಡೆಯದೇ ವರ್ಗಾವಣೆ ಅಥವಾ ನಿಯೋಜನೆ ಮಾಡದೇ ಇರಲು ಸೂಚಿಸಿದೆ.

11. ಅಗತ್ಯವಿರುವ ತಾಂತ್ರಿಕ ಅನುಭವವುಳ್ಳ ಅಧಿಕಾರಿಗಳನ್ನು / ಸಿಬ್ಬಂದಿಯನ್ನು ಇ-ಆಡಳಿತ ಘಟಕಗಳಿಗೆ / ತಾಂತ್ರಿಕ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳಲು ಇ-ಆಡಳಿತ ಘಟಕದ ಮುಖ್ಯಸ್ಥರು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಲು ಸಹ ಸೂಚಿಸಿದೆ.

12. ಇ-ಆಡಳಿತ ಘಟಕದ ಮುಖ್ಯಸ್ಥರು ಇ-ಆಡಳಿತ ವ್ಯವಸ್ಥೆಗೆ **(Promoting e-Governance – The Smart Way Forward)** ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಮಗ್ರವಾಗಿ ಅನುಷ್ಠಾನಗೊಳಿಸಲು 5 ವರ್ಷಗಳಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಯೋಜನೆಯನ್ನು ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ. ಅದಲ್ಲದೆ ಈ ಕೆಳಕಂಡ ಪ್ರಮುಖ ವಿಷಯಗಳಿಗೆ ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ಅ. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಇ-ಆಡಳಿತ ಕಾರ್ಯಕ್ರಮಗಳು
ಆ. ಇ-ಆಡಳಿತ ಕಾರ್ಯಕ್ರಮಗಳು ಹಾಗೂ ಮಾಹಿತಿ ತಂತ್ರಜ್ಞಾನದ ಕುರಿತು ತರಬೇತಿ
ಇ. ಶಾಲೆ ಹಾಗೂ ಕಚೇರಿಗಳಲ್ಲಿ ಗಣಕಯಂತ್ರಗಳು ಹಾಗೂ ಇತರೆ ಅಗತ್ಯ ವಿರುವ ಉಪಕರಣಗಳು.
ಈ. ಪ್ರಸ್ತುತ ವಿರುವ ಗಣಕಯಂತ್ರಗಳ ನಿರ್ವಹಣೆ ಹಾಗೂ ಸದ್ಬಳಕೆ
ಉ. ಐ.ಸಿ.ಟಿ ಆಧಾರಿತ ಶಿಕ್ಷಣ
ಊ. ಉಪಗ್ರಹ ಆಧಾರಿತ ಕಾರ್ಯಕ್ರಮಗಳು,
ಋ. ಆನ್ ಲೈನ್ ತಂತ್ರಾಂಶಗಳು
ಎ. ಸಮಗ್ರ ಐ.ಸಿ.ಟಿ ಪಾಲಸಿಯನ್ನು ಸೃಜಿಸುವ ಕುರಿತು.

13. ಎಲ್ಲಾ ಇ-ಆಡಳಿತ ಯೋಜನೆಗಳು ಹಾಗೂ ತಾಂತ್ರಿಕ ಕಾರ್ಯಕ್ರಮಗಳ ವರದಿಯನ್ನು ಕಡ್ಡಾಯವಾಗಿ ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

14. ಇ–ಆಡಳಿತ ಘಟಕದ ಮುಖ್ಯಸ್ಥರು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರವಾಸ ಭತ್ಯೆಗಳು, ಸಭೆಯ ವ್ಯವಸ್ಥೆಗಳು ಹಾಗೂ ಇತರೆ ಅಗತ್ಯವಿರುವ ವೆಚ್ಚಗಳನ್ನು ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಲ್ಲಿ ಬರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ, (ಯೋಜನೆ & ಇ–ಅಡಳಿತ)

20/4/2011

ಪ್ರತಿಯನ್ನು:

1. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಗಳು, ಸಿ.ಅ.ಸು.ಇ (ಆ.ಸು, ತರಬೇತಿ ಮತ್ತು ರಾ.ವಿ.ವೇ), ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಪ್ರಧಾನ ಕಾರ್ಯದರ್ಶಿಗಳು, ಐ.ಟಿ & ಬಿ.ಟಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿಗಳು, ಸಿ.ಅ.ಸು.ಇ (ಇ–ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ & ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
8. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
9. ಶ್ರೀ ಬಿ.ವಿ.ಕುಲಕರ್ಣಿ, ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನರವರಿಗೆ ಕಳುಹಿಸುತ್ತಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಇ–ಆಡಳಿತ ಘಟಕದ ಮುಖ್ಯಸ್ಥರಾಗಿ ಸರ್ಕಾರಿ ಆದೇಶದನ್ವಯ ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.
10. ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು
11. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು
12. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂ, ಬೆಂಗಳೂರು
13. ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು) / (ಆಡಳಿತ), ಶಿಕ್ಷಣ ಸಚಿವಾಲಯ, ಬೆಂಗಳೂರು
14. ನೋಡಲ್ ಅಧಿಕಾರಿಗಳು/ ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಆಯುಕ್ತರ ಕಛೇರಿ, ಬೆಂಗಳೂರು
15. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ